ಒ.ಎಸ್. - 34/2020

ಪಿ.ಡಬ್ಲ್ಯು - 01

**ದಿನಾಂಕ 14-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1,5 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ನಾನು ವೈಯಕ್ತಿಕವಾಗಿ ಡಿ ಮ್ಯಾಟ್ ಖಾತೆಯಲ್ಲಿ ಇರುವ Shares and Mutual fund ನ್ನು ಖರೀದಿಸಿಲ್ಲ. ಸಾಕ್ಷಿ ಮುಂದುವರಿದು ನನ್ನ ಅಣ್ಣ ಮನೆಯ ದುಡ್ಡಿನಲ್ಲಿ ನನ್ನ ಡಿಮ್ಯಾಟ್ ಖಾತೆಯಲ್ಲಿ ಹಣವನ್ನು Invest ಮಾಡಿ Shares and Mutual fund ನ್ನು ಖರೀದಿಸುತಿದ್ದರು. ನನ್ನ ಡಿ ಮ್ಯಾಟ್ ಖಾತೆಯಲ್ಲಿ ಇರುವ ಹಣ ಕುಟುಂಬಕ್ಕೆ ಸೇರಿದ ಹಣವಾಗಿರುತ್ತದೆ. ನನ್ನ ಡಿ ಮ್ಯಾಟ್ ಖಾತೆಯಲ್ಲಿ ಹಣ ಇರುತ್ತದೆ . 2020 ರವರೆಗೆ ಡಿ ಮ್ಯಾಟ್ ಖಾತೆಯಲ್ಲಿ ಇದ್ದ ಹಣ ಕುಟುಂಬಕ್ಕೆ ಸೇರಿದ ಹಣವಾಗಿರುತ್ತದೆ. 2020 ರವರೆಗೆ ನನ್ನ ಡಿ ಮ್ಯಾಟ್ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದು ನನಗೆ ಗೊತ್ತಿಲ್ಲ . ನನ್ನ ಡಿ ಮ್ಯಾಟ್ ಖಾತೆಯ ಅಕೌಂಟ್ ಸ್ಟೇಟ್‌ಮೆಂಟ್ ನ್ನು ತಂದು ಹಾಜರುಪಡಿಸಲು ತೊಂದರೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಈಗ ಸಿಕ್ಕದರೇ ನಾನು ತಂದು ಹಾಜರುಪಡಿಸುತ್ತೇನೆ. 2020 ರ ಈಚೇಗೆ ನನ್ನ ಡಿ ಮ್ಯಾಟ್ ಖಾತೆಯಲ್ಲಿ ಇರುವ ಹಣ ನಿಮ್ಮದಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಮ್ಮ ಖಾತೆಯಲ್ಲಿ ಇದ್ದರೇ ಅದು ನಮ್ಮದು ಆಗುತ್ತದಲ್ಲವೇ ಎಂದು ಹೇಳಿರುತಾರೆ. ಆಕ್ಸಿಸ್ ಬ್ಯಾಂಕ್ ನಲ್ಲಿ ಯಾವಾಗ ಖಾತೆ ತೆರಯಲಾಯಿತು ಎಂದು ನನಗೆ ಗೊತ್ತಿಲ್ಲ . ಆಕ್ಸಿಸ್ ಬ್ಯಾಂಕ್ ನಲ್ಲಿ ನನ್ನ ಹೆಸರಿನಲ್ಲಿ Fixed Deposit ಗಳು ಇದೆಯೋ ಇಲ್ಲವೋ ಗೊತ್ತಿಲ್ಲ. ಇದ್ದರೇ ನನ್ನ ಹೆಸರಿನಲ್ಲಿ ನನ್ನ ಅಣ್ಣ ಮಾಡಿರುತ್ತಾರೆ. ಎಫ್ ಡಿ ಮೆಚುರ್ ಆಗಿ ನಿಮಗೆ ಹಣ ಬಂದಿದೆಯಾ ಇಲ್ಲವಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 2020 ರವರೆಗೆ ಗೊತ್ತಿಲ್ಲ. 2020 ರಿಂದ ಇಲ್ಲಿಯವರೆಗೆ ಬಂದಿಲ್ಲ . ಆಕ್ಸಿಸ್ ಬ್ಯಾಂಕ್ ನ ಯಾವುದೇ ಎಫ್‌ಡಿ ರಸೀದಿಗಳು ನನ್ನ ಬಳಿ ಇಲ್ಲ. ಆಕ್ಸಿಸ್ ಬ್ಯಾಂಕ್ ನ ಸ್ಟೇಟ್‌ಮೆಂಟ್ ನ್ನು

ನಾನು ತಂದು ಹಾಜರುಪಡಿಸುತ್ತೇನೆ.  ಬ್ಯಾಂಕ್ ನ ಸ್ಟೇಟ್ ಮೆಂಟ್ ನ್ನು ನೋಡಿದರೇ ನನಗೆ ಬಡ್ಡಿ ಬಂದಿದೆಯೋ ಮತ್ತು ಎಫ್ ಡಿ ಮೇಚುರ್ ಆದರೇ ಹಣ ಬಂದಿದೆಯೋ ಎಂದು ಗೊತ್ತಾಗುತ್ತದೆ ಆದರೇ ನಾನು ಇಲ್ಲಿಯವರೆಗೆ ನೋಡಿಲ್ಲ . ನಾನು ಸ್ಟೇಟ್‌ಮೆಂಟ್ ನ್ನು ಬ್ಯಾಂಕಿನಿಂದ ತೆಗೆದುಕೊಂಡು ಅದನ್ನು ನೋಡಿ ಮುಂದಿನ ಬಾರಿ ನೋಡಿ ಹೇಳಲು ನನಗೆ 5 ದಿನ ಸಮಯಬೇಕು. ಆಕ್ಸಿಸ್ ಬ್ಯಾಂಕ್ ನ ಪಾಸ್ ಪುಸ್ತಕ ಎಲ್ಲಿಂದ ಪ್ರಾರಂಭವಾಗಿದೆ ಎಂದು ನನಗೆ ನೆನಪಿಲ್ಲ. ಆಕ್ಸಿಸ್ ಬ್ಯಾಂಕ್  ಖಾತೆಗೆ ಜಮೆಯಾದ ಎಲ್ಲಾ ಮೊತ್ತಗಳು 2020 ರವರೆಗೆ ಕುಟುಂಬದ ಮೊತ್ತ 2020 ರಿಂದ ಈಚೇಗೆ ನನ್ನ ಹಣ.  2020 ರ ನಂತರ ನಿಮ್ಮ ಖಾತೆಗೆ ಜಮೆಯಾದ ಹಣ ಯಾವುದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ನೋಡಿ ಹೇಳಬೇಕು ನೆನಪಿಲ್ಲ ಎಂದು ತಿಳಿಸಿರುತಾರೆ. 2020 ರ ನಂತರ ನಾನು ಯಾವುದೇ ಎಫ್ ಡಿ ಮಾಡಿಲ್ಲ . 2020 ರ ನಂತರ ನಾನು ಯಾವ ಠೇವಣಿ ಮಾಡಿದ್ದೇನೆ ಎಂದು ನನಗೆ ನೆನಪಿಲ್ಲ ನಮ್ಮ CA ನ್ನು ಕೇಳಿ ಹೇಳಬೇಕು. ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿದ ರಿಟನ್ಸ್‌ನ್ನು ಹಾಜರುಪಡಿಸಲು ತೊಂದರೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ತೊಂದರೆ ಇಲ್ಲ ಹಾಜರುಪಡಿಸುತ್ತೇನೆ . ಆದರೇ 2 ವರ್ಷದ ರಿಟನ್ಸ್‌ನ್ನು ನಾನು ಸಲ್ಲಿಸಿಲ್ಲ ಎಂದು ತಿಳಿಸಿರುತ್ತಾರೆ.  ನನ್ನ ಹೆಸರಿನಲ್ಲಿ ಕೆನರಾ ಬ್ಯಾಂಕ್ ನಲ್ಲಿ ಖಾತೆ ಹೊಂದಿರುತ್ತೇನೆ, ಅದು 2 ವರ್ಷದ ಹಿಂದೆ  ತೆರೆದಿರುತ್ತೇನೆ. ಇತರೆ ಯಾವುದೇ ಬ್ಯಾಂಕ್ ನಲ್ಲಿ ನನ್ನ ಖಾತೆ ಇಲ್ಲ . ಕೆನರಾ ಬ್ಯಾಂಕ್ ನಲ್ಲಿ ಯಾವುದೇ ಎಫ್ ಡಿ ಇರುವುದಿಲ್ಲ. ನಾಗಶ್ರೀ ಕೋ ಆಪರೇಟಿವ್ ಸೋಸೈಟಿಯಲ್ಲಿ ಎಷ್ಟು ಠೇವಣಿ ಇದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಯಾವುದೇ ಠೇವಣಿ ಇಲ್ಲ ಎಂದು ತಿಳಿಸಿರುತಾರೆ. ನಾಗಶ್ರೀ ಕೋ ಆಪರೇಟಿವ್ ಸೋಸೈಟಿಯಲ್ಲಿ ನಾನು ಸದಸ್ಯನಾಗಿದ್ದೆ ಆದರೇ ನನ್ನ ಎಸ್‌ಬಿ ಖಾತೆ ಇರುವುದಿಲ್ಲ . ನಾಗಶ್ರೀ ಕೋ ಆಪರೇಟಿವ್ ಸೋಸೈಟಿಯಲ್ಲಿ ರೂ 1000 ಮೊತ್ತದ ಶೇರ್ ಇರಬಹುದು ನಿಗದಿತವಾಗಿ ಎಷ್ಟು ಇದೆ ಎಂದು ನೆನಪಿಲ್ಲ. ಮೊದಲು ಕಪ್ಪು ಹಣವನ್ನು ನನ್ನ ಅಣ್ಣ ನನ್ನ ಹೆಸರಿನಲ್ಲಿ ಮತ್ತು ನನ್ನ

ತಾಯಿಯ ಹೆಸರಿನಲ್ಲಿ ಮತ್ತು ಮತ್ತೊಬ್ಬ ಅಣ್ಣನ ಹೆಸರಿನಲ್ಲಿ ಇಡುತಿದ್ದರು. ನನ್ನ ಅಣ್ಣ ನಮ್ಮ ಹೆಸರಿನಲ್ಲಿ ಬಡಗಬೆಟ್ಟು ಸೊಸೈಟಿ , ಕೆನರಾ ಕೋ ಆಪರೇಟಿವ್ ಸೊಸೈಟಿ ಹೀಗೆ ಹಲವು ಸೊಸೈಟಿ ಗಳಲ್ಲಿ ಇಟ್ಟಿದ್ದರು ಆದರೇ ಅದನ್ನು ಮುಕ್ತಾಯಗೊಳಿಸಿರುತ್ತಾರೆ. ಯಾವ ಸೊಸೈಟಿಗಳಲ್ಲಿ ಇಟ್ಟಿದ್ದರು ಎಂದು ನನ್ನ ಅಣ್ಣ ನನ್ನು ಕೇಳಿದರೇ ಅವರು ಹೇಳುತ್ತಾರೆ ನನಗೆ ಗೊತ್ತಿಲ್ಲ. ಟೌನ್ ಕೋ ಆಪರೇಟಿವ್ ಬ್ಯಾಂಕ್ ಮಾಜಿ ಸಿಇಒ ಬಿವಿ ಲಕ್ಷೀನಾರಾಯಣ ರವರ ಪರಿಚಯ ಇದೆ. ಬಿ ವಿ ಲಕ್ಷೀನಾರಾಯಣ ರವರು ಕಮಲಾಕ್ಷೀ ಗೃಹ ನಿರ್ಮಾಣ ಸಂಘವನ್ನು ನಡೆಸುತಿದ್ದರು ಎಂದರೆ ಸರಿ . ನಾನು ಬಿ ವಿ ಲಕ್ಷೀನಾರಾಯಣ ರವರ ಬಳಿ ರೂ 15,00,000 ಠೇವಣಿ ಇಟ್ಟಿದ್ದೆ ಎಂದರೆ ನೆನಪಿಲ್ಲ. ಬಿ ವಿ ಲಕ್ಷೀನಾರಾಯಣ ಮತ್ತು ನನ್ನ ನಡುವೆ ಹಣಕಾಸಿನ ವ್ಯವಹಾರ ವೈಯಕ್ತಿಕವಾಗಿ ಇರಲಿಲ್ಲ ಆದರೇ ನನ್ನಅಣ್ಣ ನನ್ನ ಹೆಸರಿನಲ್ಲಿ ಅವರ ಜೊತೆ ವ್ಯವಹಾರ ಮಾಡುತಿದ್ದರು ಆದ್ದರಿಂದ ಆಗಾಗ್ಗೆ ನನ್ನನ್ನು ಕರೆಯಿಸುತಿದ್ದರು . ಸದ್ರಿ ರೂ 15,00,000 ನ್ನು ನಾನು ಬಿ ವಿ ಲಕ್ಷೀನಾರಾಯಣ ರವರಿಂದ ವಸೂಲಿ ಮಾಡಿಕೊಂಡಿದ್ದೇನೆ ಎಂದರೆ ನನಗೆ ಗೊತ್ತಿಲ್ಲ . 2003 ರಲ್ಲಿ ಐಟಂ ನಂ 4 ರ ಸ್ವತ್ತಿನಲ್ಲಿ ನನ್ನ ಅಣ್ಣ Sathyasai Eye Specialty Hospital and Opticals ಎಂಬ ಆಸ್ಪತ್ರೆಯನ್ನು ತೆರೆದಿರುತಾರೆ ಎಂದರೆ ಸರಿ . ಅದಕ್ಕೆ ಸಂಬಂಧಿಸಿದಂತೆ Sale Tax ಮತ್ತು ಕೇಂದ್ರ ತೆರಿಗೆಗೆ ಸಂಬಂಧಿಸಿದಂತೆ ಅವರ ಹೆಸರಿನಲ್ಲಿ ನೊಂದಾವಣೆ ಆಗಿದೆ ಎಂದರೆ ಸಾಕ್ಷಿ ಎಲ್ಲವನ್ನು ಅವರೇ ನೋಡಿಕೊಳ್ಳುತಿದ್ದರು ಆದ್ದರಿಂದ ಎಲ್ಲಾ ಅವರ ಹೆಸರಿನಲ್ಲಿ ಇದೆ ನಾನು ಕೇವಲ ಆಸ್ಪತ್ರೆಯಲ್ಲಿ ಕುಳಿತುಕೊಳ್ಳುತಿದ್ದೆ ಎಂದು ತಿಳಿಸಿರುತ್ತಾರೆ. ಸದ್ರಿ ಆಸ್ಪತ್ರೆ 2006 ರಲ್ಲಿ ಬಂದ್ ಮಾಡಲಾಗಿದೆ ಎಂದರೆ ಸರಿ. ಆದರೇ ಯಾವ ಇಸವಿಯಲ್ಲಿ ಬಂದ್ ಆಯಿತು ಎಂದು ಗೊತ್ತಿಲ್ಲ .

ನಾನು 2006 ರಲ್ಲಿ ಉಡುಪಿ ಕೆಎಸ್ ಆರ್ ಟಿ ಸಿ ಬಸ್ ಸ್ಟ್ಯಾಂಡ್ ಹತ್ತಿರ ಇರುವ ಮುನ್ಸಿಪಾಲಿಟಿಗೆ ಸೇರಿದ ವಾಣಿಜ್ಯ ಮಳಿಗೆಯನ್ನು ಡೋರ್ ಸಂಖ್ಯೆ 11-1-2k ನ್ನು ನಾನು

ಬಾಡಿಗೆಗೆ ಪಡೆದಿದ್ದೆ ಎಂದರೆ ಸರಿ. ರೂ 3,58,000 ಗಳನ್ನು ನಾನು ಬಾಡಿಗೆಗೆ ಪಡೆಯುವಾಗ ಮುನ್ಸಿಪಾಲಿಟಿಗೆ Deposit ಮಾಡಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದು Non Refundable ಎಂದು ತಿಳಿಸಿರುತ್ತಾರೆ. ಸಾಕ್ಷಿಗೆ ಮುನ್ಸಿಪಾಲಟಿಗೆ 25% ಹಣವಾದ ರೂ 83750/- ಹಣ ಕಟ್ಟಿಧ ಬಗ್ಗೆ ರಸೀದಿ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಹೌದು ನಾನು ಕಟ್ಟಿದ್ದೇನೆ ಎಂದು ತಿಳಿಸಿರುತ್ತಾರೆ. ಉಳಿಕೆ ರೂ 274350/- ಹಣವನ್ನು ನಾನು ಮುನ್ಸಿಪಾಲಟಿಗೆ 28-10-2006 ರಂದು ಕಟ್ಟಿದ್ದೇನೆ ಎಂದರೆ ಸರಿ. ಈ ಬಗ್ಗೆ ರಸೀದಿ ತೋರಿಸಲಾಗಿ ಸಾಕ್ಷಿ ನೋಡಿ ಕಟ್ಟಿದ್ದೇನೆ ಎಂದು ಒಪ್ಪಿಕೊಂಡಿರುತಾರೆ. (ಸ್ರದಿ ರಸೀದಿ ಜೆರಾಕ್ಸ್ ಆಗಿರುವುದರಿಂದ ನಿಶಾನೆಯನ್ನಾಗಿ ಮಾಡಿರುವುದಿಲ್ಲ ) . ಸದರಿ ಮಳಿಗೆಯಲ್ಲಿ ನಾನು Sai Cellular and Sai Opticals ಎಂಬ ಅಂಗಡಿಯನ್ನು ತೆರೆದಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಮ್ಮ ಆಸ್ಪತ್ರೆಯಲ್ಲಿ ಉಳಿದುಕೊಂಡಿದ್ದ ಕನ್ನಡಕಗಳನ್ನು ತೆಗೆದುಕೊಂಡು ಹೋಗಿ ಇಟ್ಟಿದ್ದೆ ಎಂದು ತಿಳಿಸಿರುತ್ತಾರೆ. ಸ್ರದಿ ಅಂಗಡಿಯನ್ನು ನನ್ನ ಹೆಸರಿನಲ್ಲಿ ಪಡೆದುಕೊಂಡಿದ್ದೆ ಎಂದರೆ ಸರಿ. ಅಲ್ಲಿ ನಾನು 2-3 ವರ್ಷ ಗಳ ಕಾಲ ಅಂಗಡಿಯನ್ನು ನಡೆಸಿರುತ್ತೇನೆ. ಸ್ರದಿ ರೇವಣಿ ಇಡಲು ಕೊಟ್ಟ ಹಣ ಕುಟುಂಬದ ಹಣವಾಗಿರುತ್ತದೆ. ಸ್ರದಿ ಉದ್ಯಮ ಕೂಡ ಕುಟುಂಬಕ್ಕೆ ಸೇರಿದ ಉದ್ಯಮವಾಗಿರುತ್ತದೆ. ಸ್ರದಿ ಅಂಗಡಿ ಮಳಿಗೆಯ ಬಗ್ಗೆ Sale Tax ಇಲಾಖೆಯಿಂದ ಸರ್ಟಿಫಿಕೇಟ್ ಪಡೆದಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದನ್ನು ಎಲ್ಲಾ ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತಾರೆ . ಆಸ್ಪತ್ರೆಯಲ್ಲಿ ಇದ್ದ ಕನ್ನಡಕಗಳನ್ನು ನಾವು ಸ್ರದಿ ಮಳಿಗೆಯಲ್ಲಿ ಮಾರಾಟ ಮಾಡುದ್ದೆವು . ಸಾಕ್ಷಿ ಮುಂದುವರಿದು ನಾನು ಹೊಸ ಕನ್ನಡಕದ ಫ್ರೇಮ್ ಗಳನ್ನು ತರಲಿಲ್ಲ ಆಸ್ಪತ್ರೆಯಲ್ಲಿ ಉಳಿದುಕೊಂಡಿದ್ದನ್ನು ಆಸ್ಪತ್ರೆ ಮುಚ್ಚಿದ ನಂತರ ಸ್ರದಿ ಅಂಗಡಿ ಮಳಿಗೆಲ್ಲಿ ತಂದು ಇಟ್ಟು ಮಾರಾಟ ಮಾಡುತಿದ್ದೆ ಮತ್ತು Free Eye Camp ನಡೆಸುತಿದ್ದೆವು ಎಂದು ತಿಳಿಸಿರುತಾರೆ. ಆ ಉದ್ಯಮ ನಡೆಸುವಾಗ ಲೆಕ್ಕ ಪತ್ರಗಳನ್ನು ಇಟ್ಟಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಲೆಕ್ಕ ಪತ್ರಗಳನ್ನು ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತಾರೆ . ನಾನು ಸ್ರದಿ ಮಳಿಗೆಯನ್ನು ಬೇರೆ ಯಾರಿಗೂ ಬಾಡಿಗೆಗೆ ಕೊಡಲಿಲ್ಲ . Krishna Digital Banners ರವರ ಜೊತೆ ಸೇರಿ ಅಲ್ಲಿಯೇ ಅಂಗಡಿ ನಡೆಸುತಿದ್ದೆವು . Digital Banners ನ Trade Licence ನ್ನು ಪಡೆದಿದ್ದೇವೆ ಇಲ್ಲವೋ ಗೊತ್ತಿಲ್ಲ. ಆದರೇ ತಿಂಗಳಿಗೆ ರೂ 6500 ಬಾಡಿಗೆಗೆಯನ್ನು ಆತ ಕಟ್ಟುತಿದ್ದಾನೆ. ರೂ 6500 ನ್ನು ಅವರು ಕೊಡುತಾರೆ ನಾನು ಮುನ್ಸಿಪಾಲಿಟಿಗೆ ಕಟ್ಟುತ್ತೇನೆ. ಸ್ರದಿ ಬಾಡಿಗಗೆ ರಸೀದಿಯನ್ನು ನನ್ನ ಹೆಸರಿನಲ್ಲಿ ಮುನ್ಸಿಪಾಲಿಟಿಯವರು ಕೊಡುತಿದ್ದಾರೆ. Krishna

Digital Banners ನವರಿಗೆ ಅಂಗಡಿಯನ್ನು ಉಚಿತವಾಗಿ ಕೊಟ್ಟಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಉಚಿತವಾಗಿ ಕೊಟ್ಟಿಲ್ಲ ಆದರೇ ಮುನ್ಸಿಪಾಲಿಟಿಗೆ ಕೊಡಬೇಕಾದ ಬಾಡಿಗೆಯನ್ನು ಕಟ್ಟಿಕೊಂಡು ಹೋಗು ಎಂದು ಕೊಟ್ಟಿರುತ್ತೇನೆ ಮತ್ತು ಲಾಭ ಬಂದರೇ ಕೊಟ್ಟರೇ ಕೊಡು ಇಲ್ಲವಾದರೇ ಇಲ್ಲ ಎಂದು ಹೇಳಿರುತ್ತೇನೆ. ನಾನು ಸದ್ರಿ Krishna Digital Banners ರವರಿಂದ ತಿಂಗಳಿಗೆ ರೂ 28000 ಬಾಡಿಗೆಗೆಯನ್ನು ವಸೂಲಿ ಮಾಡುತಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ಬಾಡಿಗಗೆ ಪಡೆದಅಂಗಡಿ ಮಳಿಗೆ ನಿಮ್ಮ ಸ್ವಂತವಾಗಿ ಪಡೆದ ಮಳಿಗೆಯೋ ಅಥವಾ ಕುಟುಂಬದ ಮಳಿಗೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕುಟುಂಬದ ಹಣ ಕೊಡಲಾಗಿದೆ ಆದರೇ ನನ್ನ ಹೆಸರಿನಲ್ಲಿ ಇದೆ ಎಂದು ತಿಳಿಸಿರುತ್ತಾರೆ. ಜಂಟಿ ಕುಟುಂಬದ ಹಣವನ್ನು ಪಾವತಿಸಲಾಗಿದೆ ಎಂಬ ಬಗ್ಗೆ ದಾಖಲೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 2020 ಕ್ಕಿಂತ ಹಿಂದಿನ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿದ ರಿಟನ್ಸ್ ನೋಡಿದರೇ ಆ ಬಗ್ಗೆ ಗೊತಾಗುತ್ತದೆ ಎಂದು ತಿಳಿಸಿರುತಾರೆ. ಬಾಡಿಗೆಗೆ ಪಡೆದಿದ್ದು ಮತ್ತು ಬಾಡಿಗೆ ಕಟ್ಟುತಿರರುವ ಬಗ್ಗೆ ಈಗ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿದ ರಿಟನ್ಸ್ ನಲ್ಲಿ ಕಂಡುಬಂದಿದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನೋಡಿ ಹೇಳಬೇಕು ಎಂದು ತಿಳಿಸಿರುತ್ತಾರೆ. ಬಾಡಿಗೆ ಹಕ್ಕು ಪಾಲಾಗಲು ಇರುವ ಆಸ್ತಿಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ಮುನ್ಸಿಪಾಲಿಟಿಗೆ ಸೇರಿದ ಆಸ್ತಿ ಅವರು ಕೇಳಿದಾಗ ಬಿಟ್ಟು ಕೊಡಬೇಕು ಎಂದು ತಿಳಿಸಿ, ಸಾಕ್ಷಿ ಮುಂದುವರಿದು ಅದರ ಅವದಿ ಮುಗಿಯಿತು ಮುಂದಿನ ವರ್ಷ ಬಿಟ್ಟು ಕೊಡಬೇಕು ಎಂದು ತಿಳಿಸಿರುತ್ತಾರೆ . ನನ್ನ ಹೆಸರಿನಲ್ಲಿ ಇರುವುದರಿಂದ ಅದನ್ನು ಮುನ್ಸಿಪಾಲಿಟಿಗೆ ಬಿಟ್ಟು ಕೊಡಲು ನನಗೆ ಮಾತ್ರ ಅಧಿಕಾರ ಇರುತ್ತದೆ ಎಂದು ತಿಳಿಸಿರುತಾರೆ . ನಾನು ವೈಯಕ್ತಿಕವಾಗಿ ನನ್ನ ಹೆಸರಿನಲ್ಲಿ ಆಸ್ತಿ ಖರೀದಿ ಮಾಡಿದಿರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ನನ್ನ ಸ್ನೇಹಿತನ ಜೊತೆ ಒಂದು ವ್ಯವಹಾರ ಮಾಡಿ ಅದರಲ್ಲಿ ಬಂದ ಲಾಭಂಶದ ಹಣದಲ್ಲಿ 9 ಸೆಂಟ್ಸ್ ಜಾಗವನ್ನು ಖರೀದಿಸಿದ್ದೆ . ನನಗೆ ಸದ್ರಿ ಜಾಗವನ್ನು ಸದ್ಗುರು ಶೆಟ್ಟಿ ಎನ್ನುವವರು ಕೊಟ್ಟಿರುತ್ತಾರೆ ಅವರೇ ನನ್ನ ಜೊತೆ ವ್ಯವಹಾರ ಮಾಡಿದ್ದರು. ಪ್ರತಿಫಲದ ಹಣ ಎಷ್ಟು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ರೂ 4,00,000 ಎಂದು ಇರಬಹುದು ಎಂದು ತಿಳಿಸಿರುತಾರೆ. ಸಾಕ್ಷಿ ಮುಂದುವರಿದು ಆ ಸಮಯದಲ್ಲಿ ನನಗೆ ವಕೀಲರಾಗಿ ನೀವೆ ಇದ್ದಿರಲ್ಲವೇ ಎಂದು ತಿಳಿಸಿರುತ್ತಾರೆ. ಸಾಕ್ಷಿಗೆ ಈ ಬಗ್ಗೆ ಒಂದು ದೃಢಿಕೃತ ನೊಂದಣಿ ಪತ್ರವನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಅದೇ ದಾಖಲೆಯ ಅಡಿಯಲ್ಲಿ ತಾವು ಖರೀದಿಸಿದ್ದಾಗಿ ತಿಳಿಸಿದ ಮೇರೆಗೆ ಸದ್ರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು . ನಾನು ಹೇಳುವ

ಕುಟುಂಬಕ್ಕೂ ಈ ಕ್ರಯಪತ್ರಕ್ಕೂ ಸಂಬಂದ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸಂಬಂಧ ಇದೆ ಎಂದು ತಿಳಿಸಿರುತ್ತಾರೆ. ಸದ್ರಿ   ನಿಡಿ-1 ರಲ್ಲಿ ಕಾಣುವ ಆಸ್ತಿ ಕುಟುಂಬದ ಆಸ್ತಿಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ಅದು ನಾನು ಮಾಡಿದ ಸಣ್ಣ ವ್ಯವಹಾರದಲ್ಲಿ ಖರೀದಿಸಿದ ಆಸ್ತಿ ಎಂದು ತಿಳಿಸಿರುತ್ತಾರೆ .

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.